**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**
**ಕ್ರಿಮೀನಲ್ ಮೊಕದ್ದಮೆ ನಂ. 27/2018.**

**ಚಾಸಾ-04**

**ಪ್ರಾಸಾ-03**

**ದಿನಾಂಕಃ 07-11-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಜೆ.ಎಸ್ ಡಿಸೋಜಾ |
| ವಯಸ್ಸು | ಃ 53 ವರ್ಷ |
| ಉದ್ಯೋಗ | ಃ ಉಪ ವಲಯ ಅರಣ್ಯಾಧಿಕಾರಿ, ದಾಂಡೇಲಿ ವಲಯ |
| ವಾಸ | ಃ ದಾಂಡೇಲಿ |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

1. ನಾನು 2013 ರಿಂದ 2017 ರ ವರೆಗೆ ದಾಂಡೇಲಿ ವಲಯ ಕಚೇರಿಯಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 20-03-2014 ರಂದು ಸಂಜೆ ಸುಮಾರು 06-00 ಗಂಟೆ ಸಮಯದಲ್ಲಿ ಕೆರವಾಡ ಗ್ರಾಮದಲ್ಲಿ ಗುಂಡು ಕಲ್ಲಪ್ಪ ಗೊಂಡಾಳಕ ರವರಿಗೆ ಸೇರಿದ ದನದ ಕೊಟ್ಟಿಗೆಯಲ್ಲಿ ಮಾಲು ಇದೆ ಎಂದು ಬಂದ ಬಾತ್ಮಿ ಮೇರೆಗೆ, ಸದರಿ ವಿಷಯವನ್ನು ಚಾಸಾ-6 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿ, ಅವರಿಂದ ಶೋಧನೆಗೆ ಮೌಖಿಕ ಅನುಮತಿಯನ್ನು ಪಡೆದು, ನಾನು, ಚಾಸಾ-1 ಮತ್ತು 5 ರವರನ್ನು ಕರೆದುಕೊಂಡು ಕೆರವಾಡ ಗ್ರಾಮಕ್ಕೆ ಸಂಜೆ 06-30 ಕ್ಕೆ ತಲುಪಿದೆವು. ಅಲ್ಲಿ ಎರಡು ಜನ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದು, ಅವರಿಗೆ ಮಾಹಿತಿಯನ್ನು ತಿಳಿಸಿ, ಪಂಚರಾಗಿ ಸಹಕರಿಸಲು ಕೋರಿದೆ. ಅವರನ್ನೂ ಸಹ ನಮ್ಮ ಜೊತೆ ಕರೆದುಕೊಂಡು ಗುಂಡು ಕಲ್ಲಪ್ಪ ಗೊಂಡಾಳಕರವರ ಮನೆಗೆ ಹೋದೆವು.

3. ನಂತರ ಮನೆಯಲ್ಲಿದ್ದ ಎಲ್ಲಾ ಹೆಣ್ಣು ಮಕ್ಕಳಿಗೆ ಹೊರಬರಲು ಹೇಳಿದೇನು ಮತ್ತು ಹೊರಗೆ ಬಂದ ನಂತರ ಬಾತ್ಮಿ ವಿಚಾರವನ್ನು ತಿಳಿಸಿ, ಮನೆಯನ್ನು ಶೋಧಿಸುವ ಅವಶ್ಯಕತೆಯನ್ನು

ತಿಳಿಸಿದೆವು. ಅದರಂತೆ ಮನೆಯ ಪಕ್ಕದಲ್ಲಿರುವ ಕೊಟ್ಟಿಗೆಗೆ ಹೋದಾಗ, ಅಲ್ಲಿ ಹುಲ್ಲಿನ ಕೆಳಗೆ 4 ಸಿಸಂನ ಹಲಗೆಗಳು ಮತ್ತು ಒಂದು ಸಾಗುವಾನಿ ಮರದ ಚೌಕ ನಗ, 5 ಅಡಿಯ ಒಂದು ಗರಗಸ ಮತ್ತು ಒಂದ ಬಾಚಿ ಇದ್ದವು. ಅದೇ ರೀತಿ ಅಲ್ಲೆ ಪಕ್ಕದಲ್ಲಿದ್ದ ಇನ್ನೊಂದು ಕೋಣೆಯನ್ನು ಶೋಧಿಸಿದಾಗ, ಅಲ್ಲಿಯೂ ಒಂದು ಸಾಗುವಾನಿ ಮರದ ಚೌಕ ನಗ ಸಿಕ್ಕಿತು.

4. ನಂತರ ಎಲ್ಲಾ ಸ್ಥಳವನ್ನು ಪರಿಶೀಲನೆ ಮಾಡಿರುತ್ತೇವೆ, ಬೇರೆ ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ. ಆಗ ಮನೆಯ ಮಾಲೀಕನಾದ ಆರೋಪಿಯನ್ನು ಸದರಿ ಕಟ್ಟಿಗೆಗಳನ್ನು ಹೊಂದಲು ಅನುಮತಿ ಅಥವಾ ಪರವಾನಗಿ ಇರುವ ಬಗ್ಗೆ ವಿಚಾರಿಸಿದಾಗ, ತನ್ನ ಹತ್ತಿರ ಯಾವುದೇ ಅನುಮತಿ ಅಥವಾ ಪರವಾನಗಿ ಇರುವುದಿಲ್ಲ ಮತ್ತು ತಾನು ಸದರಿ ಕಟ್ಟಿಗೆಗಳನ್ನು ಪಕ್ಕದ ಕಾಡಿನಿಂದ ಕಡಿದುಕೊಂಡು ಬಂದಿರುವುದಾಗಿ ತಿಳಿಸಿರುತ್ತಾನೆ.

5. ನಂತರ ಸದರಿ ಎಲ್ಲಾ ವಸ್ತುಗಳನ್ನು ಕೊಟ್ಟಿಗೆಯ ಮುಂದೆ ಮನೆಯ ಮುಂದೆ ತಂದು ಇಟ್ಟು, ಅವುಗಳನ್ನು ಅಳತೆ ಮಾಡಿ, ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಆರೋಪಿಯ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಿ, ಎಲ್ಲಾ ವಸ್ತುಗಳನ್ನು ಜಪ್ತು ಮಾಡಿ, ಮುಂದಿನ ಕ್ರಮಕ್ಕಾಗಿ ವಲಯ ಕಚೇರಿಗೆ ತೆಗೆದುಕೊಂಡು ಬಂದಿರುತ್ತೇವೆ ಮತ್ತು ಅದೇ ಸಮಯಲ್ಲಿ ಆರೋಪಿಯನ್ನು ಸಹ ಕರೆದುಕೊಂಡು ಕಚೇರಿಗೆ ಹೋಗಿರುತ್ತೇವೆ. ನಂತರ ಆರೋಪಿಯನ್ನು ಮತ್ತು ಜಪ್ತಾದ ವಸ್ತುಗಳನ್ನು, ಆರೋಪಿಯ ಹೇಳಿಕೆಯನ್ನು, ಪಂಚನಾಮೆಯನ್ನು ಚಾಸಾ-6 ರವರಿಗೆ ಮುಂದಿನ ಕ್ರಮಕ್ಕಾಗಿ ಹಸ್ತಾಂತರಿಸಿರುತ್ತೇನೆ.

6. ನಂತರ ಚಾಸಾ-6 ರವರ ಆದೇಶದ ಮೇರೆಗೆ ಆರೋಪಿಯನ್ನು ಸೂಕ್ತ ಬೆಂಗಾವಲಿನೊಂದಿಗೆ ಮಾನ್ನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮರುದಿನ ಚಾಸಾ-6 ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನಿಪಿ-2 ರಲ್ಲಿರುವ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

7. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-6** ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

8. ಸಾಕ್ಷಿಯು ಸ್ವತ್ತು ಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-7** ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

9. ಸಾಕ್ಷಿಯು ನಿಪಿ-1 ನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಸಿ.ಹೆಚ್ ವಕೀಲರಿದ</u>**

10. ನನಗೆ ಆ ದಿನ ಬಾತ್ಮಿ ಬಂದಾಗ, ಸಂಜೆ 06-00 ಗಂಟೆ ಸಮಯವಾಗಿತ್ತು. ಆಗ ನಾನು ನಮ್ಮ ಕಚೇರಿಯಲ್ಲಿದ್ದೇನು.

ಪ್ರಃ ಚಾಸಾ-1 ಮತ್ತು 5 ರವರಿಗೆ ಸದರಿ ಬಾತ್ಮಿ ವಿಷಯವನ್ನು ಯಾರು ಹೇಳಿದರು?

ಉಃ ನಾನೇ ಬಾತ್ಮಿ ಬಂದ ತಕ್ಷಣ ಹೇಳಿರುತ್ತೇನೆ.

ಪ್ರಃ ಆಗ ಅವರಿಬ್ಬರು ಎಲ್ಲಿದ್ದರು?

ಉಃ ಚಾಸಾ-1 ರವರು ಅವರ ಮನೆಯ ಹತ್ತಿರ ಇದ್ದರು, ಚಾಸಾ-5 ರವರು ಕರ್ತವ್ಯದಲ್ಲಿ ಆಲೂರಿನ ಹತ್ತಿರ ಇದ್ದರು.

ಪ್ರಃ ಆಲೂರು ನಿಮ್ಮ ಕಚೇರಿಯಿಂದ ಎಷ್ಟು ದೂರದಲ್ಲಿದೆ?

ಉಃ ಅಂದಾಜು 6-7 ಕಿ.ಮೀ.

ಪ್ರಃ ನೀವು ಚಾಸಾ-1 ಮತ್ತು 5 ರವರು ಒಟ್ಟಾಗಿ ಕೆರವಾಡ ಗ್ರಾಮಕ್ಕೆ ಹೋದಿರಾ? ಅಥವಾ ಬೇರೆ ಬೇರೆಯಾಗಿ ಹೋದಿರಾ?

ಉಃ ನಾನು ಮತ್ತು ಚಾಸಾ-1 ರವರು ಒಂದೇ ವಾಹನದಲ್ಲಿ ಹೋಗಿರುತ್ತೇವೆ ಮತ್ತು ಚಾಸಾ-5 ರವರು ತಮ್ಮ ವಾಹನದಲ್ಲಿ ನಾವು ಹೋಗುವಷ್ಟರಲ್ಲಿ ಬಂದಿದ್ದರು.

ಪ್ರಃ ನೀವು ಎಷ್ಟು ಗಂಟೆಗೆ ಹೋಗಿ ತಲುಪಿದಿರಿ?

ಉಃ ಅಂದಾಜು ಸಂಜೆ 06-45

ಪ್ರಃ ಪಂಚರನ್ನು ಯಾರು ಕರೆದುಕೊಂಡು ಬಂದರು?

ಉಃ ನಾವು ಮೂರು ಜನ ಅಲ್ಲಿಗೆ ಹೋಗಿ ಕರೆದುಕೊಂಡು ಬಂದಿರುತ್ತೇವೆ

ಪ್ರಃ ಪಂಚರ ಮನೆಗಳು ಎಲ್ಲಿವೆ ?

ಉಃ ಅಲ್ಲಿಯೇ ಅಂದಾಜು 300-400 ಮೀಟರ್ ಅಂತರದಲ್ಲಿವೆ.

ಪ್ರಃ ಪಂಚರನ್ನು ಕರೆದುಕೊಂಡು ಬಂದಾಗ ಎಷ್ಟು ಸಮಯವಾಗಿತ್ತು?

ಉಃ ಅಂದಾಜು ಸಂಜೆ 06-50 ಆಗಿತ್ತು.

ಪ್ರಃ ನೀವು ಹೊರಗೆ ಹಾಕಿದಾಗ ಮನೆಯಲ್ಲಿ ಎಷ್ಟು ಜನರು ಇದ್ದರು?

ಉಃ ಮನೆಯಲ್ಲಿ 5 ಜನ ಇದ್ದರು.

ಪ್ರಃ ಅವರು ಯಾರು ಎಂದು ಹೇಳಲು ಬರುತ್ತದೆಯಾ?

ಉಃ ಆರೋಪಿ, ಆತನ ಮಗ ಮತ್ತು ಹೆಣ್ಣು ಮಕ್ಕಳು ಇದ್ದರು.

ಪ್ರಃ ಮನೆಯನ್ನು ಪ್ರವೇಶ ಮಾಡಿ, ಶೋಧಿಸಲು ನ್ಯಾಯಾಲಯದ ಆದೇಶವನ್ನು ಪಡೆದ್ದೀರಾ?

ಉಃ ನ್ಯಾಯಾಲಯದ ಆದೇಶ ಪಡೆದಿಲ್ಲ, ಆದರೆ ಚಾಸಾ-6 ರವರ ಮೌಖಿಕ ಆದೇಶವನ್ನು ಪಡೆದಿರುತ್ತೇವೆ.

ಪ್ರಃ ನೀವು ಶೋಧಿಸಿದ ಮನೆ ನಂಬರ ಎಷ್ಟು?

ಉಃ ನನಗೆ ಗೊತ್ತಿಲ್ಲ.

ಪ್ರಃ ಸದರಿ ಮನೆ ಯಾರಿಗೆ ಸೇರಿದ್ದು?

ಉಃ ಆರೋಪಿಗೆ

ಪ್ರಃ ಆ ಬಗ್ಗೆ ಯಾವುದಾದರೂ ದಾಖಲೆಯನ್ನು ಪರಿಶೀಲನೆ ಮಾಡಿದ್ದೀರಾ?

ಉಃ ಇಲ್ಲ

ಪ್ರಃ ಮೊದಲು ನೀವು ಮನೆಗೆ ಪ್ರವೇಶ ಮಾಡಿದ್ದೀರಾ ಅಥವಾ ಕೊಟ್ಟಿಗೆಗೆ ಪ್ರವೇಶ ಮಾಡಿದ್ದೀರಾ?

ಉಃ ಮೊದಲು ಕೊಟ್ಟಿಗೆಗೆ ಪ್ರವೇಶ ಮಾಡಿರುತ್ತೇವೆ ನಂತರ ಪಕ್ಕದಲ್ಲಿದ್ದ ಮನೆಗೆ ಪ್ರವೇಶ ಮಾಡಿರುತ್ತೇವೆ.

ಪ್ರಃ ಕೊಟ್ಟಿಗೆಯ ಯಾವ ಭಾಗದಲ್ಲಿ ಸಾಗುವಾನಿ ನಗ ಇತ್ತು?

ಉಃ ಕೊಟ್ಟಿಗೆಯ ಮದ್ಯಭಾಗದಲ್ಲಿತ್ತು.

ಪ್ರಃ ಸಿಸಂನ 4 ಹಲಗೆಗಳ ಯಾವ ಭಾಗದಲ್ಲಿ ಇತ್ತು?

ಉಃ ಕೊಟ್ಟಿಗೆಯ ಮದ್ಯಭಾಗದಲ್ಲಿ ದನ ಕಟ್ಟುವ ಜಾಗದಲ್ಲಿದ್ದವು.

ಪ್ರಃ ಗರಗಸ ಮತ್ತು ಬಾಚಿ ಕೊಟ್ಟಿಗೆಯ ಯಾವ ಭಾಗದಲ್ಲಿ ಇದ್ದವು?

ಉಃ ಕೊಟ್ಟಿಗೆಯ ಮೂಲೆಯಲ್ಲಿದ್ದವು.

ಪ್ರಃ ಯಾವ ದಿಕ್ಕಿನ ಮೂಲೆಯಲ್ಲಿ ಇದ್ದವು?

ಉಃ ನನಗೆ ನೆನಪಿಲ್ಲ.

ಪ್ರಃ ಕೊಟ್ಟಿಗೆಯ ಯಾವ ದಿಕ್ಕಿನಲ್ಲಿ ಮನೆ ಇತ್ತು?

ಉಃ ಕೊಟ್ಟಿಗೆಯ ಉತ್ತರ ದಿಕ್ಕಿನಲ್ಲಿರುತ್ತದೆ.

ಪ್ರಃ ಆ ಮನೆಯಲ್ಲಿ ನೀವು ಎಷ್ಟು ಕೋಣೆಗಳನ್ನು ಶೋಧಿಸಿದ್ದೀರಿ?

ಉಃ ನನಗೆ ನೆನಪಿಲ್ಲ.

ಪ್ರಃ ಎಷ್ಟನೇ ಕೋಣೆಯಲ್ಲಿ ಸಾಗುವಾನಿ ನಗ ಇತ್ತು?

ಉಃ ನನಗೆ ನೆನಪಿಲ್ಲ.

ಪ್ರಃ ಅಂದರೇ ನೀವು ಕೊಟ್ಟಿಗೆಯಿಂದ ಮನೆಯನ್ನು ಪ್ರವೇಶಿಸಿದ್ದೀರಾ?

ಉಃ ಹೌದು.

ಪ್ರಃ ಸದರಿ ವಿಷಯವನ್ನು ನಿಮ್ಮ ಹೇಳಿಕೆಯಲ್ಲಿ ಚಾಸಾ-6 ರವರ ಬಳಿ ಹೇಳಿದ್ದೀರಾ?

ಉಃ ಇಲ್ಲ.

ಪ್ರಃ ಅಲ್ಲಿ ನೀವು ಫೋಟೋ ಏನಾದರು ತೆಗೆದೀರಾ?

ಉಃ ಇಲ್ಲ.

ಪ್ರಃ ಕೊಟ್ಟಿಗೆ ಮತ್ತು ಕೋಣೆಯಲ್ಲಿ ಸಿಕ್ಕ ವಸ್ತುಗಳನ್ನು ಅವು ಸಿಕ್ಕ ಸ್ಥಳದಿಂದ ಪಂಚನಾಮೆಯ ಮಾಡುವ ಸ್ಥಳಕ್ಕೆ ಯಾರು ತೆಗೆದುಕೊಂಡು ಬಂದರು?

ಉಃ ನಾನು ಮತ್ತು ನಮ್ಮ ಸಿಬ್ಬಂದಿ.

ಪ್ರಃ ಎಲ್ಲಾ ವಸ್ತುಗಳನ್ನು ಪಂಚನಾಮೆಯ ಮಾಡುವ ಸ್ಥಳಕ್ಕೆ ತಂದಾಗ ಎಷ್ಟು ಸಮಯವಾಗಿತ್ತು?

ಉಃ ಅಂದಾಜು 07-00 ಗಂಟೆಯಾಗಿತ್ತು.

ಪ್ರಃ ಕೊಟ್ಟಿಗೆ ಮತ್ತು ಕೋಣೆಯಲ್ಲಿ ಸಿಕ್ಕ ವಸ್ತುಗಳು ಅವು ಸಿಕ್ಕ ಸ್ಥಳದಿಂದ ಪಂಚನಾಮೆಯ ಮಾಡುವ ಸ್ಥಳಕ್ಕೆ ಎಷ್ಟು ದೂರ?

ಉಃ ಅಂದಾಜು 15-20 ಮೀಟರ.

ಪ್ರಃ ಪಂಚರಿಗೆ ಓದಲು ಬರೆಯಲು ಬರುವುದಿಲ್ಲ ಎಂದು ಯಾರು ಹೇಳಿದರು?

ಉಃ ಅವರೇ ಹೇಳಿರುತ್ತಾರೆ.

ಪ್ರಃ ಪಂಚನಾಮೆಯನ್ನು ಬರೆಯಲು ಯಾರು ಮಾಹಿತಿ ನೀಡಿದರು?

ಉಃ ನಾನೇ ನೀಡಿರುತ್ತೇನೆ.

ಪ್ರಃ ಪಂಚನಾಮೆಯನ್ನು ಓದಿ ಸಹಿ ಮಾಡಿದ್ದೀರಾ?

ಉಃ ಹೌದು

ಪ್ರಃ ಪಂಚನಾಮೆಯ ಒಂದನೇ ಪುಟದಲ್ಲಿ ಕೊನೆಯ 7 ಮತ್ತು 8ನೇ ಸಾಲಿನಲ್ಲಿ 'ಆರೋಪಿಯನ್ನು ..........ತಂದು ಇಟ್ಟಿದ್ದು ಇರುತ್ತದೆ' ಎಂದು ನಮೂದಿಸಿದ್ದು, ಅಂದರೆ ನೀವು ಪಂಚನಾಮೆಯನ್ನು ವಲಯ ಕಚೇರಿಯಲ್ಲಿ ತಯಾರಿಸಿದ್ದೀರಾ?

ಉಃ ನಾವು ಪಂಚನಾಮೆಯನ್ನು ಆರೋಪಿಯ ಮನೆಯ ಮುಂದೆ ಜರುಗಿಸಿ, ಪಂಚನಾಮೆಯನ್ನು ಬರೆದು, ವಸ್ತುಗಳು ಮತ್ತು ಆರೋಪಿಯನ್ನು ಕರೆದುಕೊಂಡು ಬಂದು, ವಲಯ ಕಚೇರಿಯಲ್ಲಿ ಚಾಸಾ-6 ರವರಿಗೆ ನೀಡುವ ಸಮಯದಲ್ಲಿ, ಈ ಮೇಲಿನ ಸಾಲುಗಳನ್ನು ಪಂಚನಾಮೆಯಲ್ಲಿ ಬರೆದು, ಪಂಚರ ಸಹಿ ಪಡೆದಿರುತ್ತೇವೆ.

ಪ್ರಃ ಜಪ್ತು ಪಡಿಸಿದ ವಸ್ತುಗಳನ್ನು ಯಾವುದರಲ್ಲಿ ವಲಯ ಕಚೇರಿಗೆ ತೆಗೆದುಕೊಂಡು ಯಾರು ಹೋದರು.

ಉಃ ನಾವೇ ಒಂದು ಬಾಡಿಗೆ ವಾಹನ ಮಾಡಿಕೊಂಡು ತಂದಿರುತ್ತೇವೆ.

ಪ್ರಃ ಸದರಿ ಬಾಡಿಗೆ ವಾಹನ ಯಾರಿಗೆ ಸೇರಿತ್ತು?

ಉಃ ನನಗೆ ಗೊತ್ತಿಲ್ಲ

ಪ್ರಃ ಸದರಿ ಬಾಡಿಗೆ ವಾಹನವನ್ನು ಯಾರ ಚಾಲನೆ ಮಾಡುತ್ತಿದ್ದರು?

ಉಃ ನನಗೆ ಹೆಸರು ಗೊತ್ತಿಲ್ಲ.

ಪ್ರಃ ನೀವು ಕಚೇರಿಗೆ ಬಂದಾಗ ಎಷ್ಟು ಗಂಟೆ ಆಗಿತ್ತು?

ಉಃ ಅಂದಾಜು ಸಂಜೆ 07-30 ಆಗಿತ್ತು

ಪ್ರಃ ಕಚೇರಿಯಿಂದ ನಿವೇಲ್ಲರೂ ಕೆಲಸ ಮುಗಿಸಿಕೊಂಡು ಹೋಗುವಾಗ ಎಷ್ಟು ಸಮಯವಾಗಿತ್ತು?

ಉಃ ಪಂಚರು ಮೊದಲೇ ಹೋಗಿರುತ್ತಾರೆ, ನಾವು ನಂತರ ಹೋಗಿರುತ್ತೇವೆ.

11. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನನಗೆ ಯಾವುದೇ ಬಾತ್ಮಿ ಬಂದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ಮತ್ತು 5 ರವರನ್ನುಹಾಗೂ ಪಂಚರ ಜೊತೆ ಕೆರವಾಡ ಗ್ರಾಮಕ್ಕೆ ಹೋಗಿ, ಆರೋಪಿಯ ಮನೆಗೆ ಹೋಗಿ, ಶೋದಿಸಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಯನ್ನು ನಾವೇಲ್ಲರೂ ಸೇರಿ, ಕಚೇರಿಯಲ್ಲಿಯೇ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

12. ಆರೋಪಿಗೂ ಈ ಪ್ರಕರಣದಲ್ಲಿ ಜಪ್ತು ಮಾಡಿದ ವಸ್ತುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾರಸುದಾರರು ಅಥವಾ ಆರೋಪಿತರು ಸಿಗದಂತಹ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ದುರಪಯೋಗಪಡಿಸಿಕೊಂಡು ಆರೋಪಿಯ ವಿರುದ್ಧ ಸಲ್ಲಿಸಿದ ಸುಳ್ಳು ದೂರನ್ನು ನೀಡಿ ಸುಳ್ಳು ಪ್ರ.ವ.ವರದಿಯನ್ನು ಸಲ್ಲಿಸಿ, ಸುಳ್ಳು ಪ್ರಕರಣ ದಾಖಲಿಸಿ, ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೆ ಗುನ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ ಇದೆ/-

(ತೇಜಸ್ವಿನಿ ಸೊಗಲದ)

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.